ಅಸಲು ದಾವಾ ನಂ. **:89/2016**
ಪಿ ಡಬ್ಲ್ಯೂ **:1**

(ಇಂದು ದಿನಾಂಕಃ **08-12-2025** ರಂದು ಸಾಕ್ಷಿಯನ್ನು ಕರೆಸಿ ಪ್ರಮಾಣ ವಚನ ಬೋಧಿಸಲಾಯಿತು.)

ಪಾಟೀ ಸವಾಲುಃ- ಪ್ರತಿವಾದಿ ಪರ ವಕೀಲರಾದ ಶ್ರೀ ಕೆ ಎಲ್ ಎನ್ ರವರಿಂದಃ

ದಾವಾಸ್ತಿಯ ಸರ್ವೆ ನಂ. 13 ಇದ್ದು ಒಟ್ಟು ವಿಸ್ತೀರ್ಣ36 ಗುಂಟೆ ಇರುತ್ತದೆ. ಸದರಿ ಸ್ವತ್ತು ಮೊದಲು ನನ್ನ ಅಜ್ಜ ಸಿದ್ದಯ್ಯನ ಹೆಸರಿನಲ್ಲಿ ಇತ್ತು. ಸಿದ್ದಯ್ಯನಿಗೆ 4 ಜನ ಹೆಣ್ಣು ಮಕ್ಕಳು, 3 ಜನ ಗಂಡು ಮಕ್ಕಳು ಇದ್ದರು. ಸಿದ್ದಯ್ಯ ಮರಣ ನಂತರ ಗಂಡು ಮಕ್ಕಳ ನಡುವೆ ಹಿಸ್ಸೆಯಾಗಿರುತ್ತದೆ. ಸದರಿ ಹಿಸ್ಸಾ ಪತ್ರವನ್ನು ನೋಡಿರುತ್ತೇನೆ. ಸದರಿ ಹಿಸ್ಸೆಯ ಪ್ರಕಾರ ನನ್ನ ತಂದೆಗೆ 2 ಎಕರೆ 25 ಗುಂಟೆ ಬಂದಿರುತ್ತದೆ. ಸದರಿ ಹಿಸ್ಸೆಯ ಪಾಲುಪಟ್ಟಿ ಪ್ರಕಾರ ನನ್ನ ತಂದೆಗೆ 2 ಎಕರೆ 20 ಗುಂಟೆ ಬಂದಿರುತ್ತದೆ ಎಂದರೆ ಸರಿ. 1 ಮತ್ತು 2ನೇ ಪ್ರತಿವಾದಿಯರಿಗೆ ಸದರಿ ಹಿಸ್ಸೆ ಪತ್ರದ ಪ್ರಕಾರ ತಲಾ 2 ಎಕರೆ ಬಂದಿರುತ್ತದೆ ಎಂದರೆ ಸಾಕ್ಷಿ 2 ಎಕರೆ 4 ಗುಂಟೆ ಬಂದಿರುತ್ತದೆ ಎಂದು ನುಡಿಯುತ್ತಾರೆ.

ಸದರಿ ಪಾಲು ಪಟ್ಟಿಯ ಪ್ರಕಾರ ಖಾತೆ ಮಾಡಿಸಿಕೊಂಡಿರುತ್ತೇನೆ. ನಮ್ಮ ಹಳೆ ಮನೆಗಳು ಸರ್ವೆ ನಂ.13 ರಲ್ಲಿ ಬರುತ್ತದೆ. ಸದರಿ ಸರ್ವೆ ನಂಬರಿನಲ್ಲಿ ಇರುವ ಮನೆಗಳನ್ನು ಹಿಸ್ಸೆ ಮಾಡಿಕೊಂಡಿರುವುದಿಲ್ಲ. ಸಾಕ್ಷಿಗೆ ಛಾಯಾ ಚಿತ್ರಗಳನ್ನು ತೋರಿಸಿ ಸದರಿ ಛಾಯಾಚಿತ್ರಗಳ ಪ್ರಕಾರ ಹಿಸ್ಸೆಯಾಗಿರುತ್ತದೆ ಎಂದರೆ ಹೌದು ಎಂದು ಒಪ್ಪಿಕೊಂಡಿದ್ದರಿಂದ ಸದರಿ ಛಾಯಾ ಚಿತ್ರವನ್ನು ನಿಡಿ-1 ಎಂದು ಗುರುತಿಸಲಾಯಿತು.

ನಿಡಿ-1 ರಲ್ಲಿ ಕಂಡು ಬರುವ ಛಾಯಾಚಿತ್ರದಲ್ಲಿನ ಮೊದಲನೇ ಮನೆ ನನ್ನ ತಂದೆ ಪಾಲಿಗೆ ಬಂದಿರುತ್ತದೆ. ಸದರಿ ಮನೆಯ ಪಕ್ಕದಲ್ಲಿ ಕಂಡುಬರುವ ಮನೆ 2ನೇ ಪ್ರತಿವಾದಿಯ ಪಾಲಿಗೆ ಬಂದ ಮನೆಯಾಗಿರುತ್ತದೆ. ಸದರಿ ಮನೆಗಳ ಮುಂದಿನ ಜಾಗ ಎಷ್ಟಿದೆ ಎಂದು ವಿಸ್ತೀರ್ಣ ಗೊತ್ತಿಲ್ಲ. ಪಾಲುಪಟ್ಟಿಯಲ್ಲಿ ಮನೆ ಮತ್ತು ರಸ್ತೆಗೆ ಎಂದು 16 ಗುಂಟೆ ಬಿಟ್ಟಿರುತ್ತದೆ ಎಂದರೆ ಸರಿ. ಒಟ್ಟು ವಿಸ್ತೀರ್ಣ 6 ಎಕರೆ 36 ಗುಂಟೆಯಲ್ಲಿ 16 ಗುಂಟೆ ಕಳೆದಿರುತ್ತಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಯಾವಾಗ ವಿಭಾಗ ಆಗಿರುತ್ತದೆ ಎಂದು ಗೊತ್ತಿಲ್ಲ.

ದಾವೆಯ ವಿವರಗಳನ್ನು ನಾನೇ ಹೇಳಿ ಬರೆಸಿರುತ್ತೇನೆ. ಸದರಿ ನನ್ನ ದಾವೆಯಲ್ಲಿ 3ನೇ ಪ್ಯಾರಾದಲ್ಲಿ ನನ್ನ ತಂದೆಯ ಸಹೋದರರ ನಡುವೆ ದಿ:20-03-1982 ರಂದು ವಿಭಾಗ ಆಗಿರುತ್ತದೆ ಎಂದು ಬರೆಸಿರುತ್ತೇನೆ. ಸದರಿ ವಿಭಾಗ ಪತ್ರದ ಪ್ರಕಾರ ಒಟ್ಟು ವಿಸ್ತೀರ್ಣ 6 ಎಕರೆ 36 ಗುಂಟೆಯಲ್ಲಿ ನನ್ನ ತಂದೆಗೆ 2 ಎಕರೆ 20 ಗುಂಟೆ ಮತ್ತು 1 ಮತ್ತು 2ನೇ ಪ್ರತಿವಾದಿಯರಿಗೆ ತಲಾ 2 ಎಕರೆಯಂತೆ ಅವರ ಪಾಲಿಗೆ ಹೋಗಿರುತ್ತದೆ ಎಂದು ಬರೆಸಿರುತ್ತೇನೆ ಎಂದರೆ ಸರಿ.

ನನ್ನ ತಂದೆಯ ಪಾಲಿಗೆ ಬಂದ 2 ಎಕರೆ 20 ಗುಂಟೆಯ ಪೂರ್ವಕ್ಕೆ ಕರಿಯಮ್ಮ ದೇವಸ್ಥಾನ, ಪಶ್ಚಿಮಕ್ಕೆ ಕರಿಯಮ್ಮ ದೇವಸ್ಥಾನಕ್ಕೆ ಹೋಗುವ ದಾರಿ, ದಕ್ಷಿಣಕ್ಕೆ ಚಂದ್ರೇಗೌಡರ ಜಮೀನಿಗೆ ಹೋಗುವ ರಸ್ತೆ, ಉತ್ತರಕ್ಕೆ 2ನೇ ಪ್ರತಿವಾದಿಯ ಜಮೀನು ಇರುತ್ತದೆ. ದಾವಾಸ್ತಿಗು ನನ್ನ ತಂದೆಯ ಪಾಲಿಗೆ ಬಂದ 2 ಎಕರೆ 20 ಗುಂಟೆಗೆ ಹೊಂದಿಕೊಂಡಿರುವುದಿಲ್ಲ. ದಾವಾಸ್ತಿಗು ಮತ್ತು 1ನೇ ಪ್ರತಿವಾದಿಗೆ ಬಂದ ಆಸ್ತಿಗು ಬೇರೆ ಬೇರೆ ಇರುತ್ತದೆ ಎಂದರೆ ಸರಿಯಲ್ಲ. ಸದರಿ ಮೇಲ್ಕಂಡಂತೆ ಹಂಚಿಕೆಯಾಗಿ ಉಳಿದ 16 ಗುಂಟೆ ಜಮೀನನ್ನು ಮನೆಗೆ ಬಿಟ್ಟುಕೊಂಡಿರುತ್ತೇವೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಪಾಲು ಪಟ್ಟಿಯಲ್ಲಿ 16 ಗುಂಟೆಯ ಪೈಕಿ 6 ಗುಂಟೆ ರಸ್ತೆಗೆ ಬಿಟ್ಟು ಉಳಿದ ಜಾಗದಲ್ಲಿ ಅವರವರ ಹಿಸ್ಸೆಗೆ ಬಂದ ಮನೆಗೆ ಸಂಬಂದಿಸಿದಂತೆ ಹಿತ್ತಲು ಜಾಗ ಬಿಟ್ಟುಕೊಂಡ ಬಗ್ಗೆ ಬರೆಯಲಾಗಿರುತ್ತದೆ ಎಂದರೆ ಸಾಕ್ಷಿ ಪಾಲು ಪಟ್ಟಿಯಲ್ಲಿ ಬರೆಯಲಾಗಿರುತ್ತದೆ ಆದರೆ ನನಗೆ ಗೊತ್ತಿಲ್ಲ ಎಂದು ನುಡಿಯುತ್ತಾರೆ.

1ನೇ ಪ್ರತಿವಾದಿ ನಿಡಿ-1 ಛಾಯಾಚಿತ್ರದಲ್ಲಿ ಅವರ ಹಿಸ್ಸೆಗೆ ಹೋದ ಜಾಗದ ಮುಂಭಾಗದಲ್ಲಿ ಮನೆ ಕಟ್ಟಿರುತ್ತಾರೆ ಎಂದರೆ ಸಾಕ್ಷಿ ಅಳತೆ ಮಾಡಿ ಕಟ್ಟಿಲ್ಲ ಎಂದು ನುಡಿಯುತ್ತಾರೆ. ಸಾಕ್ಷಿಗೆ ಇನ್ನೊಂದು ಛಾಯಾಚಿತ್ರವನ್ನು ತೋರಿಸಿ ಸದರಿ ಛಾಯಾಚಿತ್ರದಲ್ಲಿ ಮನೆ ಕಟ್ಟುತ್ತಿರುವ ಜಾಗದ ಪಕ್ಕದಲ್ಲಿ ನಮ್ಮ ಮನೆ ಕಂಡು ಬರುತ್ತದೆ ಎಂದು ಒಪ್ಪಿಕೊಂಡ ಕಾರಣ ಸದರಿ ಛಾಯಾಚಿತ್ರವನ್ನು ನಿಡಿ-2 ಎಂದು ಗುರುತಿಸಲಾಯಿತು. ನಿಡಿ-1 ಛಾಯಾಚಿತ್ರದಲ್ಲಿ 1ನೇ ಪ್ರತಿವಾದಿ ತನಗೆ ಬಂದ ಮನೆಯ ಮುಂಭಾಗದಲ್ಲಿ ಮನೆ ಕಟ್ಟುತ್ತಿದ್ದಾರೆ ಎಂದರೆ ಸಾಕ್ಷಿ ಗೊತ್ತಿಲ್ಲ ಎಂದು ನುಡಿಯುತ್ತಾರೆ. ಹಳೆ ಮನೆಗೆ ಹೋಗಲು ರಸ್ತೆಯನ್ನು ಎಲ್ಲಿ ಬಿಟ್ಟುಕೊಂಡಿದ್ದೇವೆ ಎಂದು ಗೊತ್ತಿಲ್ಲ. ನನ್ನ ತಂದೆಯ ಪಾಲಿಗೆ ಬಂದ ಮನೆಯಲ್ಲಿ ನನ್ನ ತಂದೆ

ವಾಸವಾಗಿದ್ದರು. ನನ್ನ ತಂದೆಯ ಮರಣ ನಂತರ ನಾವು ಸದರಿ ಮನೆಯಲ್ಲಿ ವಾಸವಾಗಿಲ್ಲ. ಸದರಿ ಮನೆಗೆ ಹೋಗಿ ಬರುತ್ತಿರುತ್ತೇವೆ.

ನಮ್ಮ ತಂದೆಗೆ ಬಂದ ಮನೆಯಿಂದ ಪ್ರತಿವಾದಿ ಕಟ್ಟುತ್ತಿರುವ ಮನೆಗು ಎಷ್ಟು ದೂರ ಆಗುತ್ತದೆ ಎಂದರೆ ಸಾಕ್ಷಿ 4–5 ಅಡಿ ಇರುತ್ತದೆ ಎಂದು ನುಡಿಯುತ್ತಾರೆ. 1ನೇ ಪ್ರತಿವಾದಿ ನನ್ನ ತಂದೆಯ ಪಾಲಿಗೆ ಬಂದ ಮನೆಗೆ ಹೊಂದಿಕೊಂಡಂತೆ ಮನೆ ಕಟ್ಟುತ್ತಿದ್ದಾರೆ. ನಮ್ಮ ತಂದೆಯ ಪಾಲಿಗೆ ಬಂದ ಮನೆಯ ಪಕ್ಕದಲ್ಲಿ ಎಷ್ಟು ಗುಂಟೆ ಜಾಗ ಬಂದಿದೆ ಎಂದು ಗೊತ್ತಿಲ್ಲ. ನನ್ನ ತಂದೆಗೆ ಬಂದ ವನೆಯ ಹಿಂದಿನ ಮತ್ತು ಮುಂದಿನ ಜಾಗ ಎಷ್ಟು ಬಂದಿತ್ತು ಎಂದು ಗೊತ್ತಿಲ್ಲ. ಅದೇ ರೀತಿ 2ನೇ ಪ್ರತಿವಾದಿಗೆ ಬಂದ ಮನೆಯ ಮುಂದಿನ ಜಾಗ ಮತ್ತು ಹಿಂದಿನ ಹಿತ್ತಲು ಎಷ್ಟು ವಿಸ್ತೀರ್ಣ ಇದೆ ಎಂದು ಗೊತ್ತಿಲ್ಲ.

16 ಗುಂಟೆಯಲ್ಲಿ ನನ್ನ ತಂದೆ ಮತ್ತು ಪ್ರತಿವಾದಿಯರಿಗೆ ಬಂದ ಮನೆಗಳು ಮತ್ತು 1ನೇ ಪ್ರತಿವಾದಿ ಕಟ್ಟುತ್ತಿರುವ ಮನೆಯ ಜಾಗ ಬರುತ್ತದೆ ಎಂದರೆ ಸಾಕ್ಷಿ 6 ಎಕರೆ 36 ಗುಂಟೆಯಲ್ಲಿ ಬರುತ್ತದೆ ಎಂದು ನುಡಿಯುತ್ತಾರೆ. ಅಳತೆ ಮಾಡದೇ ಕಟ್ಟಿದ ಕಾರಣ 1ನೇ ಪ್ರತಿವಾದಿ 6 ಎಕರೆ 36 ಗುಂಟೆಯಲ್ಲಿ ಎಲ್ಲಿ ಮನೆ ಕಟ್ಟುತ್ತಿದ್ದಾರೆ ಎಂದು ಗೊತ್ತಿಲ್ಲ. ದಾವೆಯಲ್ಲಿ 1ನೇ ಪ್ರತಿವಾದಿ ಮನೆಯಲ್ಲಿ ಎಲ್ಲಿ ಕಟ್ಟುತ್ತಿದ್ದಾರೆ ಎಂದು ಬರೆಸಿರುತ್ತೀರಿ ಎಂದರೆ ಸಾಕ್ಷಿ 6 ಎಕರೆ 36 ಗುಂಟೆಯಲ್ಲಿ ಮನೆ ಕಟ್ಟುತ್ತಿರುತ್ತಾರೆ ಎಂದು ಬರೆಸಿರುತ್ತೇನೆ ಎಂದು ನುಡಿಯುತ್ತಾರೆ. 6 ಎಕರೆ 36 ಗುಂಟೆಯಲ್ಲಿ ಯಾವ ದಿಕ್ಕಿನಲ್ಲಿ 1ನೇ ಪ್ರತಿವಾದಿ ಮನೆ ಕಟ್ಟುತ್ತಿದ್ದಾರೆ ಎಂದು ಗೊತ್ತಿಲ್ಲ.

**(ಮುಂದುವರಿದ ಪಾಟೀ ಸವಾಲಿಗೆ ಪ್ರತಿವಾದಿ ಪರ ವಕೀಲರು ಕಾಲವಕಾಶ ಕೋರಿದ್ದು, ನೀಡಲಾಯಿತು.)**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

(ನಾಗೇಂದ್ರ)
ಸಿವಿಲ್ ನ್ಯಾಯಾಧೀಶರು ಮತ್ತು
ಜೆ.ಎಂ.ಎಫ್.ಸಿ. ನ್ಯಾಯಾಲಯ, ಬೇಲೂರು